



ಸುದ್ದಿ ಸಂಚಯ

# 'ಸ್ವಚ್ಛ ಮೈಸೂರು ಸ್ವಸ್ಥ ಜೀವನ': ಸಮಾರೋಪ

**ಮೈ**ಸೂರು ಶ್ರೀರಾಮಕೃಷ್ಣ ಆಶ್ರಮವು ಹಮ್ಮಿಕೊಂಡಿದ್ದ ೪೦ ವಾರಗಳ **'ಸ್ವಚ್ಛ ಮೈಸೂರು ಸ್ವಸ್ಥ ಜೀವನ'** ಎಂಬ ಸ್ವಚ್ಛತಾ ಅಭಿಯಾನ ಮತ್ತು ಜನಜಾಗೃತಿ ಕಾರ್ಯಕ್ರಮದ ೪೦ನೇ ವಾರದ ಅಭಿಯಾನವು ೨೦೧೭ರ ಡಿಸೆಂಬರ್ ೩೧ ರಂದು ನಗರದ ರಾಮಕೃಷ್ಣನಗರದ 'ಐ' ಬ್ಲಾಕ್, ವಾಸು ಲೇಔಟ್, ಇ ಮತ್ತು ಎಫ್ ಬ್ಲಾಕ್, ಮಾಧವ ಪಾರ್ಕ್, ಡಿ.ವಿ.ಸಿ. ಲೇಔಟ್ ಸೇರಿದಂತೆ ವಿವಿಧ ಭಾಗಗಳಲ್ಲಿ ಯಶಸ್ವಿಯಾಗಿ ನಡೆಯಿತು.

೪೦ನೇ ವಾರದ **'ಧನ್ಯತಾ ಸಮಾರಂಭ'**ದಲ್ಲಿ ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಆತ್ಮಜ್ಞಾನಂದಜಿ ಮಹಾರಾಜ್, ಮುಖ್ಯ ಅತಿಥಿಗಳಾಗಿ ಮೈಸೂರು ಜಿಲ್ಲಾಧಿಕಾರಿಗಳಾದ ಶ್ರೀ ಡಿ. ರಂದೀಪ್, ಮೈಸೂರು ಮಹಾನಗರಪಾಲಿಕೆಯ ಆಯುಕ್ತರಾದ ಶ್ರೀ ಜಿ. ಜಗದೀಶ್, ವಿಶೇಷ ಆಹ್ವಾನಿತರಾಗಿ ಮೈಸೂರು ಮಹಾನಗರಪಾಲಿಕೆಯ ಮಹಾಪೌರರಾದ ಶ್ರೀ ಎಂ. ಜೆ. ರವಿಕುಮಾರ್, ಮಾಜಿ ವಿಧಾನಪರಿಷತ್ ಸದಸ್ಯರಾದ ಶ್ರೀ ಡಿ. ಮಾದೇಗೌಡ, ಅಂತರಾಷ್ಟ್ರೀಯ ಯೋಗಪಟು ಕು. ಖುಷಿ, ಎಂ. ಸಿ. ಸಿ. ಫೆಡರೇಷನ್ ಆಫ್ ವಾರ್ಡ್ ಪಾರ್ಲಿಮೆಂಟಿನ ಉಪಾಧ್ಯಕ್ಷರಾದ ಪ್ರೊ. ಕೆ. ಎಸ್. ನಾಗಪತಿ ಮೊದಲಾದವರು ಪಾಲ್ಗೊಂಡಿದ್ದರು. ರಾಮಕೃಷ್ಣನಗರದ ನಗರಪಾಲಿಕೆ ಸದಸ್ಯರಾದ ಶ್ರೀ ಎಂ. ಕೆ. ಶಂಕರ್ ಅವರು ಈ ಕಾರ್ಯಕ್ರಮವನ್ನು ಆಯೋಜಿಸಿದ್ದರು.

ಸ್ವಾಮೀಜಿಯವರು, ಮುಖ್ಯ ಅತಿಥಿಗಳು ಮತ್ತು ವಿಶೇಷ ಆಹ್ವಾನಿತರು ಧನ್ಯತಾ ಸಮಾರಂಭದಲ್ಲಿ ಸೇರಿದ ಪ್ರತಿಯೊಬ್ಬರಲ್ಲೂ ಸ್ವಚ್ಛತೆ ಕಾಪಾಡುವ ಸಂಕಲ್ಪ ಮಾಡಿ, ಸ್ವಚ್ಛತಾ ಅಭಿಯಾನದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂದು ವಿನಂತಿಸಿಕೊಂಡರು.

ಪ್ರತಿಯೊಬ್ಬರೂ ಸ್ವಚ್ಛತಾ ಆ್ಯಪ್‌ನ್ನು ಡೌನ್‌ಲೋಡ್ ಮಾಡಿ ಸಾರ್ವಜನಿಕ ಸ್ಥಳಗಳಲ್ಲಿ ಸಂಗ್ರಹವಾಗಿರುವ ಕಸದ ಬಗ್ಗೆ ದೂರನ್ನು ಕಳುಹಿಸುವ ಮೂಲಕ, ಸ್ವಚ್ಛ ಮೈಸೂರು ನಿರ್ಮಾಣ ಮಾಡಲು ಸಹಕರಿಸಬೇಕೆಂದು ಸಮಾರಂಭದಲ್ಲಿ ಸೇರಿದ ಎಲ್ಲರಲ್ಲಿ ವಿಶೇಷವಾಗಿ ವಿನಂತಿಸಿಕೊಳ್ಳಲಾಯಿತು.

ರಾಮಕೃಷ್ಣನಗರದ ಮುಖ್ಯ ರಸ್ತೆಗಳಲ್ಲಿ ಶಾಲೆ, ಕಾಲೇಜು ವಿದ್ಯಾರ್ಥಿಗಳ ಮೆರವಣಿಗೆಯ ಮೂಲಕ ಜನರಲ್ಲಿ ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿಸಿದ್ದು ಈ ಸಮಾರೋಪ ಕಾರ್ಯಕ್ರಮಕ್ಕೆ ವಿಶೇಷ ಮೆರುಗನ್ನು ನೀಡಿತು.

ಸ್ವಯಂಸೇವಕರು ಮತ್ತು ವಿದ್ಯಾರ್ಥಿಗಳು ಮನೆಮನೆಗಳಿಗೆ ಭೇಟಿ ನೀಡಿ ನಿವಾಸಿಗಳು ಕಸವನ್ನು ಹೊರಗಡೆ ಎಸೆಯಬಾರದು, ಪ್ಲಾಸ್ಟಿಕ್ ಚೀಲಗಳನ್ನು ಉಪಯೋಗಿಸಬಾರದು ಮತ್ತು ತಮ್ಮ ಸುತ್ತಮುತ್ತಲಿನ ಪ್ರದೇಶವನ್ನು ಸ್ವಚ್ಛವಾಗಿ ಕಾಪಾಡಿಕೊಳ್ಳಬೇಕು ಎಂದು ಈ ಅಭಿಯಾನದ ಮೂಲಕ ಸಾರ್ವಜನಿಕರಲ್ಲಿ ವಿನಂತಿಸಿಕೊಂಡರು.

ಆಶ್ರಮದ ಸ್ವಯಂಸೇವಕರು, ಕುವೆಂಪುನಗರದ ಪ್ರಥಮ ದರ್ಜೆ ಕಾಲೇಜು, ಟಿ.ಟಿ.ಎಲ್ ಕಾಲೇಜು, ವಿಶ್ವಪ್ರಜ್ಞ ಕಾಲೇಜು, ವಿಶ್ವಮಾನವ ಪ್ರೌಢಶಾಲೆ, ಕೌಟಿಲ್ಯ ವಿದ್ಯಾಲಯ, ಸುಪ್ರೀಂ ಪಬ್ಲಿಕ್ ಶಾಲೆ, ರಾಮಕೃಷ್ಣ ವಿದ್ಯಾಕೇಂದ್ರ, ಸುಕೃತ ಪದವಿಪೂರ್ವ ಕಾಲೇಜು ಮತ್ತು ರಾಮಯ್ಯ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳು ಮತ್ತು ಸ್ಥಳೀಯ ನಾಗರಿಕರನ್ನು ಒಳಗೊಂಡಂತೆ ಒಟ್ಟು ೮೦೦ ಜನ ಅಭಿಯಾನದಲ್ಲಿ ಪಾಲ್ಗೊಂಡು ಸಾರ್ವಜನಿಕರಲ್ಲಿ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸಿದರು. ಸ್ವಚ್ಛತೆಯನ್ನು ಕಾಪಾಡಲು ಬೇಕಾದ ಅಂಶಗಳನ್ನೊಳಗೊಂಡ ಕರಪತ್ರಗಳನ್ನು ಮನೆ ಮನೆಗಳಿಗೆ ವಿತರಿಸಲಾಯಿತು.








# ಮಂಗಳೂರು ರಾಮಕೃಷ್ಣ ಮಠದಲ್ಲಿ 'ಭಾವಸಂಗಮ ೧೮: ಭಕ್ತ ಸಮಾಗಮ'

**ಮಂ**ಗಳೂರು ರಾಮಕೃಷ್ಣ ಮಠವು ಜನವರಿ ೨೬ ರಿಂದ ೨೮ರ ವರೆಗೆ ಮೂರು ದಿನಗಳ 'ಸಮಸ್ತ ಕರ್ನಾಟಕದ ಸದ್ಭಕ್ತರಿಗಾಗಿ ಮೂರು ದಿನಗಳ ಕಾಲ ಚಿಂತನ-ಮಂಥನ' ಕಾರ್ಯಕ್ರಮವಾದ **ಭಾವಸಂಗಮ-೧೮** ಅನ್ನು ನೆರವೇರಿಸಿತು. ಈ ಕಾರ್ಯಕ್ರಮದಲ್ಲಿ ಸುಮಾರು ೭೫೦ ಮಂದಿ ಭಕ್ತರು ಭಾಗವಹಿಸಿದ್ದರು. ದೂರದ ಊರುಗಳಿಂದ ಬಂದ ಸುಮಾರು ೩೦೦ ಮಂದಿ ಭಕ್ತರಿಗೆ ವಸತಿ ವ್ಯವಸ್ಥೆ ಮಾಡಲಾಗಿತ್ತು. ೧೮೯೩ರಲ್ಲಿ ಚಿಕಾಗೋದಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನದಲ್ಲಿ ಸ್ವಾಮಿ ವಿವೇಕಾನಂದರು ಮಾಡಿದ ಐತಿಹಾಸಿಕ ಭಾಷಣದ ೧೨೫ನೇ ಶತಮಾನೋತ್ಸವವನ್ನು ಆಚರಿಸುತ್ತಿರುವ ಈ ಸಂದರ್ಭದಲ್ಲಿ, **'ಸಮನ್ವಯ ಮತ್ತು ಸ್ವೀಕಾರ'** ಎಂಬ ಪರಿಕಲ್ಪನೆಯೊಂದಿಗೆ ವಿವಿಧ ಗೋಷ್ಠಿಗಳನ್ನು ನಡೆಸಲಾಯಿತು. ಸುಮಾರು ಎಂಟು ಗೋಷ್ಠಿಗಳಲ್ಲಿ ಸಂನ್ಯಾಸಿಗಳು ಹಾಗೂ ವಿದ್ವಜ್ಜನರ ೨೫ ಭಾಷಣಗಳಿದ್ದವು. ದಿವ್ಯತ್ರಯರ ಜೀವನ ಸಂದೇಶ ಹಾಗೂ ಶಾಸ್ತ್ರಗಳ ಹಿನ್ನೆಲೆಯಲ್ಲಿ 'ಸಮನ್ವಯ - ಸ್ವೀಕಾರ' ವಿಷಯವನ್ನು ಕುರಿತಂತೆ ಈ ಭಾಷಣಗಳು ನಡೆದವು. ವಿವಿಧ ಪ್ರವಚನಕಾರರ ಚಿಂತನ-ಮಂಥನಗಳಿಂದ, ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳಿಂದ ಕಾರ್ಯಕ್ರಮವು ಅತ್ಯಂತ ಸ್ಫೂರ್ತಿದಾಯಕವೂ ಚೇತೋಹಾರಿಯೂ ಆಗಿತ್ತು .

**ಉದ್ಘಾಟನೆ:** ಜನವರಿ ೨೬ ರಂದು ಅಮೆರಿಕದ ಬಾಸ್ಟನ್‌ನಲ್ಲಿರುವ ವೇದಾಂತ ಸೊಸೈಟಿಯ ಮುಖ್ಯಸ್ಥರಾದ ಸ್ವಾಮಿ ತ್ಯಾಗಾನಂದಜಿಯವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಜನವರಿ ೨೮ರಂದು ನಡೆದ ಸಮಾರೋಪ ಸಮಾರಂಭದಲ್ಲಿ ಉಡುಪಿ ಪೇಜಾವರ ಮಠದ ಶ್ರೀ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿಯವರು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

**ಚಿಂತನ-ಮಂಥನ ಗೋಷ್ಠಿಗಳು:** ದಿವ್ಯತ್ರಯರ ಸಮನ್ವಯ ಸಂದೇಶಗಳನ್ನು ಕುರಿತು ನಡೆದ ಈ ಗೋಷ್ಠಿಗಳಲ್ಲಿ ಸ್ವಾಮಿ ನಿತ್ಯಸ್ಥಾನಂದಜಿ, ಸ್ವಾಮಿ ಆತ್ಮಜ್ಞಾನಂದಜಿ, ಸ್ವಾಮಿ ತ್ಯಾಗೀಶ್ವರಾನಂದಜಿ, ಸ್ವಾಮಿ ಶಾಂತಿವ್ರತಾನಂದಜಿ, ಸ್ವಾಮಿ ಧರ್ಮವ್ರತಾನಂದಜಿ, ಸ್ವಾಮಿ ನಿರ್ಭಯಾನಂದ ಸರಸ್ವತಿ, ಸ್ವಾಮಿ ವೀರೇಶಾನಂದ ಸರಸ್ವತಿ, ಸ್ವಾಮಿ ಪ್ರಕಾಶಾನಂದಜಿ, ಮಾತಾ ವಿವೇಕಮಯಿ, ಮಾತಾ ಯೋಗಾನಂದಮಯಿ, ಮಾತಾ ತ್ಯಾಗಮಯಿ, ಡಾ. ಕೆ. ಅನಂತರಾಮು, ಡಾ. ಜಿ.ಎಸ್. ಜಯದೇವ, ಡಾ. ಕೆ. ಎಲ್. ಪ್ರಸನ್ನಾಕ್ಷೀ, ಲಕ್ಷ್ಮೀಶ ತೋಳ್ಪಾಡಿ, ಡಾ. ಶ್ರೀರಾಮ ಭಟ್ಟ, ಶ್ರೀಕೃಷ್ಣ ಉಪಾಧ್ಯಾಯ, ಡಾ. ತೇಜಸ್ವಿನಿ ಬಿ. ವೈ. ಭಾಗವಹಿಸಿದರು.

**ಸಾಂಸ್ಕೃತಿಕ ಕಾರ್ಯಕ್ರಮಗಳು:** ದತ್ತಾತ್ರೇಯ ವೇಲಂಕರ್ ಅವರಿಂದ **ಭಗವನ್ನಾಮ ಸಂಕೀರ್ತನ**, ಡಾ. ಎಂ. ಪ್ರಭಾಕರ ಜೋಷಿ, ಸರ್ಪಂಗಳ ಈಶ್ವರ ಭಟ್ ಹಾಗೂ ದೇರಾಜೆ ಸೀತಾರಾಮ ಭಟ್ ಹಾಗೂ ಇತರರಿಂದ **ತಾಳಮದ್ದಳೆ**, ಶ್ರೀ ವಿದ್ಯಾಭೂಷಣ ಅವರಿಂದ **ಭಕ್ತಿಗಾನಾಮೃತ**, ಡಾ. ಕಬ್ಬಿನಾಲೆ ಬಾಲಕೃಷ್ಣ ಭಾರದ್ವಾಜ್ ಅವರಿಂದ **ಕನ್ನಡ ಅಷ್ಟಾವಧಾನ**, ಕುದ್ರೋಳಿ ಗಣೇಶ್ ಅವರಿಂದ **'ವಿಸ್ಮಯ ಜಾದೂ'** ಮ್ಯಾಜಿಕ್ ಶೋ ನಡೆದವು. ೨೮ರಂದು ಭಾನುವಾರ ಹಲವು ಮಂದಿ ಭಕ್ತರು 'ಸ್ವಚ್ಛ ಮಂಗಳೂರು' ಅಭಿಯಾನದಲ್ಲಿ ಪಾಲ್ಗೊಂಡರು.




Managing Editor : Swami Atmajnananda
Editor : Swami Jnanayogananda
Printed and Published by Swami Atmajnananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020